prospects will the Government consider the question of giving Scholarships to the children of the teachers who study in schools?

Mr. SPEAKER.—How does it arise out of this?

Sri M. GOVINDA REDDY.— This relates to the improving of the prospects of the teachers.

ಶ್ರೀ ಜಿ. ಎ. ಆರ್ಯರವರು (ಬೆಂಗಳೂರು ಜಿಲ್ಲೆ).—ಖಾಸಗೀ ಪಾಠಶಾಲೆಗಳವರು ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತಾರೆಯೇ?

Sri T. SIDDALINGIAH.—That does not arise.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—On a point of order, Sir. "That does not arise" ಎಂಬುದನ್ನು ಸ್ಪೀಕರ್‌ರವರು ಹೇಳಬಹುದೇ ಹೊರತು ಮಾನ್ಯ ಮಂತ್ರಿಗಳವರು ಹೇಳುವುದು ಸರಿಯಲ್ಲ.

Mr. SPEAKER.—I do not think so. If a supplementary does not arise out of the main question, the concerned Minister can say so.

Sri B. HUTCHE GOWDA.—It is for the Speaker to decide.

Mr. SPEAKER.—Next Question. Question No. 141.

Construction of buildings for Primary Schools.

*Q.—141. **Sri T. MADIAH GOWDA** (Bangalore District—General).—

Will the Government be pleased to state.—

(*a*) the amount sanctioned for the construction of primary school buildings for the year 1949-50 and for construction of how many buildings;

(*b*) the number of school buildings that are so far constructed for completely for the year 1949;

(*c*) the amount spent so far and the amount likely to lapse?

*A.—**Sri T. SIDDALINGIAH** (Minister for Education and Public Health).—

(*a*) Rs. 7,22,000.

(*b*) and (*c*) The work of construction of the buildings is entrusted to the Deputy Commissioners of Districts and the Presidents, District Boards, Mysore and Tumkur, except in the case of Bangalore City area where the work is entrusted to the Executive Engineer, Buildings Division, Bangalore. Details regarding the number of buildings constructed, etc., are not readily available.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರದ ಪ್ರೈಮರಿ ಪಾಠಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಜಿಲ್ಲಾ ಡೆಪ್ಯುಟಿ ಕಮಿಷನರ್‌ರವರಿಗೂ, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೂ ವಹಿಸಿದೆ ಎಂದು ಹೇಳಿದ್ದೀರಿ. ಆದರೂ ಅದರಿಂದ ಎಷ್ಟು ಹಣ ಖರ್ಚಾಯಿತು, ಎಷ್ಟು ಪಾಠಶಾಲೆಯ ಕಟ್ಟಡಗಳು ನಿರ್ಮಿತವಾದುವು ಎಂಬ ಅಂಕಿ ಅಂಶಗಳನ್ನು ಸರ್ಕಾರದವರು ಪಡೆಯುವುದಕ್ಕೆ ಸಾಧ್ಯವಾಗಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಮಾಚಾರ ಈಗ ಸಿದ್ಧವಾಗಿ ದೊರೆತಿಲ್ಲ. ಏಕೆಂದರೆ ಹಣ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಂದ ಡೆಪ್ಯುಟಿ ಕಮಿಷನರ್‌ರವರಿಗೆ ವರ್ಗಾಯಿಸಲಾಗಿದೆ. At the end of the year they will give their reports. Then it can be furnished to the House.

ಶ್ರೀ ಟಿ. ಮಾದಯ್ಯಗೌಡರು.—ಯಾವ ಯಾವ ಶಾಲೆಗಳ ಕಟ್ಟಡಗಳನ್ನು ಡೆಪ್ಯುಟಿ ಕಮಿಷನರ್‌ರವರು ಒಪ್ಪುತ್ತಾರೋ ಅವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ಕಳುಹಿಸಿಕೊಟ್ಟು ಮುಂಜೂರಾತಿಯನ್ನು ಪಡೆಯಬೇಕಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಪಡೆದಿರುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆ ಕಳುಹಿಸಿದ್ದರೆ ಈ ವರ್ಷ ಎಷ್ಟು ಶಾಲೆಯ ಕಟ್ಟಡಗಳಿಗೆ ಮುಂಜೂರಾತಿ ದೊರೆತಿದೆ ಎಂಬ ಅಂಶವನ್ನು ತಿಳಿಸಬಲ್ಲರಾ?

Sri T. SIDDALINGIAH.—The Hon'ble Member's question is about 1949-50, the current year, which is not yet over. Definite answer can be given only after the official year is over.

ಶ್ರೀ ಟಿ. ಮಾದಯ್ಯಗೌಡರು.—ಮೂರು ತಿಂಗಳಿಗೆ ಒಂದು ಸಲ ಡೆಪ್ಯುಟಿ ಕಮಿಷನರ್‌ರವರು ವರದಿಯನ್ನು ಕಳುಹಿಸಿಕೊಡಬೇಕೆಂದು ನಿಯಮವಿದೆಯಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರು ಕೇಳಿರುವ ಪ್ರಶ್ನೆ 1949–50ಕ್ಕೆ ಸಂಬಂಧಪಟ್ಟಿದ್ದು. Till the year is over, I am not expected to give piecemeal quarterly reports.

ಶ್ರೀ ಟಿ. ಮಾದಯ್ಯಗೌಡರು.—ಇಲ್ಲಿಯವರೆಗೂ ತಾವು ಉತ್ತರವನ್ನು ದಯಪಾಲಿಸಿದ್ದೀರಿ. ಆದರೆ ಇಲ್ಲಿಯ ತನಕ ಎಷ್ಟು ಪಾಠಶಾಲೆಗಳನ್ನು ಕಟ್ಟಿಸಲಾಗಿದೆ. ಅದಕ್ಕಾಗಿ ಎಷ್ಟು ಹಣ ಖರ್ಚಾಗಿರುತ್ತೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಈ ತಕ್ಷಣಕ್ಕೆ ತಿಳಿಸಲಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ತಾವು ತಿಳಿಸಿರುವ 7,22,000 ರೂಪಾಯಿಗಳ ಪೈಕಿ ಎಷ್ಟು ಹಣ ಇಲ್ಲಿಯವರೆಗೆ ಖರ್ಚಾಗಿದೆ, ಎಷ್ಟು ಹಣ ಇನ್ನೂ ಖರ್ಚಾಗಬಹುದು, ಅಥವಾ ಉಳಿದರೆ ಎಷ್ಟು ಉಳಿಯಬಹುದೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ತಮ್ಮ ರಿವೈಸ್ಡ್ ಬಡ್ಜೆಟ್ ಅಂದಾಜಿನ ಪ್ರಕಾರ ಎಷ್ಟು ಹಣ ಖರ್ಚಾಗಿದೆಯೆಂಬುದನ್ನು ಹೇಳಬಹುದಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಬಡ್ಜೆಟ್ಟಿನಲ್ಲೇ ಕೊಟ್ಟಿದೆ.

ಶ್ರೀ ಟಿ. ಮಾದಯ್ಯಗೌಡರು.—ನಮಗೆ ಕೊಟ್ಟಿರ ತಕ್ಕ ಬಡ್ಜೆಟ್ಟಿನಲ್ಲಿ ಅದು ಕಾಣುತ್ತಿಲ್ಲ. ಅದಕ್ಕೋಸ್ಕರ ನಾನು ಕೇಳಿದೆ

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಡ್ಜೆಟ್ಟಿನಲ್ಲಿಲ್ಲ ವೆಂದು ತಾವು ಹೇಳುತ್ತಿದ್ದೀರಿ. ಅದು ಸರಿಯಲ್ಲ. ಅದರಲ್ಲೇ ಖಂಡಿತವಾಗಿಯೂ ಕೊಟ್ಟಿದೆ. I am sure it is found in the Budget.

ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ತಮಗೇನು ಬೇಕಾಗಿದೆ ಯೆಂಬುದನ್ನು ತಿಳಿಸಿ.

ಶ್ರೀ ಟಿ. ಮಾದಯ್ಯಗೌಡರು.—ಇಲ್ಲಿಯ ವರೆಗೆ ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ಎಷ್ಟು ಹಣ ಖರ್ಚಾಗಿರತ್ತೆಂಬುದು ನನಗೆ ತಿಳಿಸಬೇಕು.

Sri H. C. DASAPPA.—Please see page 28 of the 'Budget Estimates for the year 1950-51, Vol. II.

ಶ್ರೀ ಟಿ. ಮಾದಯ್ಯಗೌಡರು.—ತಾವು ಈ ಬಾಬಿಗೆ ಒದಗಿಸಿರುವ 7,22,000 ರೂಪಾಯಿಗಳ ಪೈಕಿ ಎಲ್ಲವೂ ಖರ್ಚಾಗುತ್ತದೆಂದು ಭಾವಿಸೋಣವೇ ?

Sri H. C. DASAPPA.—According to the revised estimates for 49–50, the anticipated expenditure is Rs. 7,22,000.

ಶ್ರೀ ಟಿ. ಮಾದಯ್ಯಗೌಡರು.—ಎಷ್ಟೆಷ್ಟು ಪ್ರಾಥಮಿಕ ಶಾಲೆಗಳ ಕೆಲಸ ಸಂಪೂರ್ಣವಾಗಿ ಮುಗಿದು ಅವುಗಳನ್ನು ಉಪಯೋಗಿಸಲು ಅನುಕೂಲವಾಗಬೇಕೆಂಬ ಅಂಕಿ ಅಂಶಗಳನ್ನು ತಾವು ಹೀಗೆ ಸಿದ್ಧ ಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಕಟ್ಟಡಗಳ ಕೆಲಸವನ್ನೆಲ್ಲಾ ಈಗ ಬೇರೆ ಬೇರೆ ಇಲಾಖೆಗಳವರಿಗೆ ವರ್ಗಮಾಡಿ ಕೊಡಲಾಗಿದೆ. ಆ ಅಧಿಕಾರವೆಲ್ಲಾ ಅವರಿಗೇ ವಹಿಸಲಾಗಿದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ತಾವು ಇಲ್ಲಿ ಜಿಲ್ಲಾಧಿಕಾರಿಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಎಷ್ಟು ಹಣ ಖರ್ಚುಮಾಡಬಹುದೆಂಬುದನ್ನು ಪಾತ್ರ ಕೊಟ್ಟಿದ್ದೀರಿ. ಆದರೆ ಎಷ್ಟೂ ಹಣ ಇಲ್ಲಿ ಕಾರ್ಯತಃ ಖರ್ಚಾಗುತ್ತಿಲ್ಲವೆಂಬುದು ತಮಗೆ ಗೊತ್ತಿದೆಯೇ ?

Sri H. C. DASAPPA.—We have got to wait for the accounts.

ಶ್ರೀ ಟಿ. ಮಾದಯ್ಯಗೌಡರು.—ಚರ್ಚೆ ಬೇಕಾಗಿಲ್ಲ. ತಾವೀಗ ತಿಳಿಸಿರುವ 7,22,000 ರೂಪಾಯಿಗಳಲ್ಲಿ ಕೊಂಚೆವೂ ಲ್ಯಾಪ್ಸ್ ಆಗುವುದಿಲ್ಲವೇ ?

ಅಧ್ಯಕ್ಷರು.—ಈಗ ಅವರು ರಿವೈಸ್ಡ್ ಎಸ್ಟಿಮೇಟನ್ನು ತಯಾರಿಸಿದ್ದಾರೆ. ಎಷ್ಟು ಹಣ ಲ್ಯಾಪ್ಸ್ ಆಗುತ್ತದೆಂಬುದನ್ನು ಈಗ ಅವರು ಹೇಗೆ ಹೇಳುವುದಕ್ಕಾಗುತ್ತದೆ ? ಅದು ಪರ್ಚಾಸ್ಯೆರಿನಲ್ಲಿ ಗೊತ್ತಾಗತಕ್ಕ ವಿಚಾರ.

ಶ್ರೀ ಟಿ. ಮಾದಯ್ಯಗೌಡರು.—ಇಲ್ಲಿಯವರೆಗೆ ಖರ್ಚಾಗಿರತಕ್ಕದ್ದನ್ನು ನೋಡಿ, ಇಲ್ಲಿಯವರೆಗೆ ಎಷ್ಟು ಖರ್ಚಾಗಬೇಕಾಗಿತ್ತೋ ಅಷ್ಟಾಗದೆ ಇದ್ದರೆ, ಅದನ್ನು ತಿಳಿಸಲಕ್ಕೆ ಆಗುವುದಿಲ್ಲವೇ ?

Sri T. SIDDALINGIAH.—I think the question is very vague.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಕಟ್ಟಿಸತಕ್ಕ ಕೆಲಸವನ್ನು ತಾವೀಗ ಜಿಲ್ಲಾಧಿಕಾರಿಗಳಿಗೂ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರಿಗೂ ಕೊಟ್ಟಿದ್ದೀರಿ. ಹೀಗೆ ಮಾಡಿದ್ದರಿಂದ ಪಾಠಶಾಲೆಗಳನ್ನು ಕಟ್ಟಿಸುವ ಕೆಲಸ ವೇಗವಾಗಿ ನಡೆಯುತ್ತದೆಂದು ಭಾವಿಸಿದ್ದೀರಾ ? ಮತ್ತು ಹಾಗೆ ಭಾವಿಸಿದ್ದರೆ ಅದು ಸರಿಯಾದ ಭಾವನೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈ ಕಟ್ಟಡಗಳ ವಿಷಯವಾಗಿ ಗ್ರಾಮಾಂತರ ಗಳವರಿಂದಲೇನಾದರೂ ಸಹಾಯ ಒದಗುತ್ತದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ಸಂದರ್ಭಗಳಲ್ಲಿ ತಾವಾಗಿಯೇ ಮುಂದೆ ಬಂದು ಸಹಾಯ ಮಾಡಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಂಥಾ ಕಟ್ಟಡಗಳ ಬಗ್ಗೆ ಧನ ಸಹಾಯವನ್ನೊದಗಿಸಿದ್ದರೂ ಕಟ್ಟಡಗಳನ್ನು ಏಕೆ ಇನ್ನೂ ಪೂರ್ತಿಯಾಗಿ ಕಟ್ಟಿಸಿರುವುದಿಲ್ಲ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಪೂರ್ತಿಯಾಗಿ ಕಟ್ಟಿಸಿಲ್ಲವೆಂಬುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಇಂಥಾ ಸಂದರ್ಭಗಳಿದ್ದರೆ ತಮ್ಮ ಗಮನಕ್ಕೆ ತರಬಹುದೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಗತ್ಯವಾಗಿ ತರಬಹುದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಈಗಲೇ ತಿಳಿಸಲೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಮ್ಮ ಇಷ್ಟ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಕಡೂರು ತಾಲ್ಲೂಕಿನಲ್ಲಿ 5–6 ವರ್ಷಗಳ ಹಿಂದೆಯೇ ಕೆಲವು ಸಂದರ್ಭಗಳಲ್ಲಿ 500 ರೂಪಾಯಿ, ಮತ್ತೆ ಕೆಲವು ಸಂದರ್ಭಗಳಲ್ಲಿ 1,000 ರೂಪಾಯಿಗಳನ್ನು ಸರ್ಕಾರದವರು ಪಡೆದು, ತಹಲ್‌ವರೆಗೂ ಕೆಲಸ ನಡೆಸದೆ ಇರತಕ್ಕ ಬಗ್ಗೆ, ಹಾಗೆ ಹಣ ಡಿಪಾಜಿಟ್ ಮಾಡಿರುವ ರಶೀದಿಗಳನ್ನು ತಂದು ತೋರಿಸಿದರೆ ತಮಗೆ ಗೊತ್ತಾಗುತ್ತದೆಯಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಾಗುತ್ತದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ತಾವು ಈ ಬಾಬಿಗೆ ಒದಗಿಸಿರುವ 7,22,000 ರೂಪಾಯಿಗಳಲ್ಲಿ ಇಷ್ಟು ಹಣ ಖರ್ಚಾಗುವುದಿಲ್ಲವೆಂದು ತಿಳಿದುಕೊಳ್ಳಬಹುದಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಗೂ ತಿಳಿದುಕೊಳ್ಳಬಹುದು, ಹೀಗೂ ತಿಳಿದುಕೊಳ್ಳಬಹುದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೀಗೆ ಅನೇಕ ಕಡೆಗಳಲ್ಲಿ ಶಾಲಾ ಕಟ್ಟಡಗಳಿಲ್ಲದೆ, ಮರದ ಕೆಳಗೆ ಬಾಲಕರುಗಳಿಗೆ ಪಾಠ ಹೇಳುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೋಗಲಿ, ಸರ್ಕಾರಿ ಕಟ್ಟಡಗಳಿಲ್ಲದೆ ಅನೇಕ ಕಡೆ ಈ ಸ್ಕೂಲುಗಳನ್ನು ಪಂಚಾಯಿತಿ ಹಾಲುಗಳಲ್ಲಿ ನಡೆಸುತ್ತಿರುವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆಲ್ಲ ಕೆಲವು ಷರತ್ತುಗಳಿರುತ್ತವೆ. ಆದರ ಪ್ರಕಾರ ನಡೆಸಲಾಗುತ್ತಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆದಷ್ಟು ಜಾಗ್ರತೆ ಈ ಶಾಲಾ ಕಟ್ಟಡಗಳನ್ನೊದಗಿಸಬೇಕಾದುದು ಸರ್ಕಾರದವರ ಕರ್ತವ್ಯವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಸರ್ಕಾರದವರು ಪಾಠಶಾಲೆಗಳನ್ನು ಮಂಜೂರುಮಾಡಿ ನಂತರ

ಕಟ್ಟಿದ ಕೆಲಸಗಳಿಗಾಗಿ ಚೆಂಡರನ್ನು ಕರೆಯತಕ್ಕವರು ಯಾರು ? ತಾಲ್ಲೂಕು ಅಮಲ್ದಾರರೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಬಾಬನ್ನು ಜಿಲ್ಲಾಧಿಕಾರಿಗಳಿಗೂ ಮತ್ತು ಇಂಜನಿಯರಿಂಗ್ ಇಲಾಖೆಯವರಿಗೂ ವಹಿಸಲಾಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು — ಹೀಗೆ ಎರಡು ಇಲಾಖೆಗಳೂ ಹೊಂದಿಕೊಂಡು ಕೆಲಸ ನಡೆಯುವ ಎಷ್ಟು ಕಾಲಹರಣಿಯಾಗಿ ಹೋಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— ಆದಷ್ಟು ಬೇಗ ಕೆಲಸವಾಗುವಂತೆ ಮಾಡಿಸಲಾಗುತ್ತೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇಂಜನಿಯರಿಂಗ್ ಇಲಾಖೆಯವರಿಂದ ಕೆಲಸಕಾರ್ಯಗಳು ಬೇಗ ಬೇಗ ನಡೆದಾಗ್ಯೂ, ರೆವೆನ್ಯೂ ಇಲಾಖೆಯವರಿಂದ ಇದು ನಿಧಾನವಾಗುತ್ತಿದೆಯೆಂಬುದನ್ನು ತಾವು ಒಪ್ಪುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವು, ಎರಡು ಇಲಾಖೆಗಳೂ ಸೇರಿ ನಡೆಸಬೇಕಾದ ಕೆಲಸಗಳು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇಂಜನಿಯರಿಂಗ್ ಇಲಾಖೆಯವರೊಬ್ಬರಿಂದಲೇ ಕೆಲಸನಡೆಸುವುದು ಉತ್ತಮವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— ನಾನು ಆದಷ್ಟು ಜಾಗ್ರತೆ ಕೆಲಸ ನಡೆಸುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—ಈಗಾಗಲೇ ಸರ್ಕಾರದವರು ಹೊಸದಾಗಿ ಮಂಜೂರು ಮಾಡಿರುವ 70 ಪಾಠಶಾಲೆಗಳ ವಿಷಯ ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಆ ಪೈಕಿ 10 ಪಾಠಶಾಲೆಗಳು ಈಗಾಗಲೆ ಪ್ರಾರಂಭವಾಗಿ, ಅವು ಉಪಯೋಗದಲ್ಲಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು. — ಬಂದಿದೆ.

ಶ್ರೀ ಎಂ ಸಿ. ಶಿವಾನಂದಶರ್ಮರವರು.— ಹಾಗೆ ಜಾಗ್ರತೆ ಕಟ್ಟಿ ಪೂರೈಸಿರುವ ಅನೇಕ ಕಟ್ಟಡಗಳಲ್ಲಿ ಕೆಲವು ಸರ್ವೆ ಮತ್ತು ನಾಟೀ ಜಾತಿ ವಾರದ ಸಾಮಾನುಗಳನ್ನು ಹಾಕಿದ್ದು, ಅವೀಗ ಗೆದ್ದಲಿಗೆ ಸಿಕ್ಕಿಬಿದ್ದು ಹಾಳಾಗಿಹೋಗುತ್ತಿರುವುದೂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಂ. ಸಿ. ಶಿವಾನಂದಶರ್ಮರವರು. —ತಮ್ಮ ಗಮನಕ್ಕೆ ಬಂದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಗಬಹುದು.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ದೇವನಹಳ್ಳಿ ತಾಲ್ಲೂಕಿನಲ್ಲಿ ಆ ರೀತಿ ಹತ್ತಾರು ಪಾಠಶಾಲೆಗಳು ಬಿದ್ದುಹೋಗುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಂಥಾದ್ದೇನಾದರೂ ಇದ್ದರೆ ತಾವು ತಿಳಿಸಬಹುದು. ಅದನ್ನು ತೀವ್ರವಾಗಿ ವಿಚಾರ ಮಾಡಲಾಗುತ್ತದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಈಗಲೇ ತಿಳಿಸಿದರೆ ಸಾಕಾಗುವುದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರಿಯಾದ ಕ್ರಮದಲ್ಲಿ ವರದಿ ಮಾಡಿದರೆ ಅದನ್ನು ನೋಡಿ, ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಗ್ರಾಮಗಳಿಗೆ ಸ್ಕೂಲುಗಳನ್ನು ಕೊಡಬೇಕಾಗಿದ್ದರೆ, ಗ್ರಾಮಸ್ಥರು ಸ್ಕೂಲಿಗೆ ಕಟ್ಟಡವನ್ನು ಕೊಡುವುದಾದರೆ ಕೊಡಬಹುದೆಂದು ಹೇಳುತ್ತಿರುವುದು ನಿಜವೇ ?

ಅಧ್ಯಕ್ಷರು.—ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

Sri T. SIDDALINGIAH.—I beg to submit that what Sri Hanumiah says is not correct. ನಾನು ಹಾಗೆ ಹೇಳಲಿಲ್ಲ. It is a wrong presumption.

Sri H. M. CHANNABASAPPA (Mysore District—General).—Out of Rs. 7,22,000, have Government transferred a sum of Rs. 80,000 to the Mysore District Board ?

Sri K. PUTTASWAMI (Mandya District—General).—That is within the knowledge of the Hon'ble Member himself.

Mr. SPEAKER.—All the members of this House are entitled to know.

Sri K. PUTTASWAMI.—Question hour is meant for the Hon'ble Members to get themselves enlightened and not to put questions on what they know.

Mr. SPEAKER.—The information is meant for all members of the House.

Sri H. M. CHANNABASAPPA.—Is this amount of Rs. 80,000 transferred to the District Board till now ?

Sri T. SIDDALINGIAH.—I require notice to answer that question. Anyway not the whole amount. Some amount has been transferred.

Sri H. M. CHANNABASAPPA.—When was the amount transferred ?

Sri T. SIDDALINGIAH.—I want notice to answer that question.

Sri H. M. CHANNABASAPPA.—Was a sum of Rs. 60,000 out of the allotments made in 1948-49 allotted to the Mysore District Board ?

Sri T. SIDDALINGIAH.—I want notice to answer that question.

Sri H. M. CHANNABASAPPA.—Sir, has any amount for the construction of buildings for primary schools been transferred to the Mysore District Board till to-day ?

Sri T. SIDDALINGIAH.—I believe some amount has been transferred.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈಗ ನಾನಾ ಡಿಸ್ಟ್ರಿಕ್ಟ್ ಬೋರ್ಡ್‌ಗಳವರು ಸ್ಕೂಲು ಕಟ್ಟಡಗಳನ್ನು ತಮಗೆ ತೋರಿದಂತೆ ಬೇರೆ ಬೇರೆ ಮಾದರಿಯಲ್ಲಿ ಕಟ್ಟಿಸಿಕೊಳ್ಳುತ್ತಿದ್ದಾರೆ, ಅಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ಬಗ್ಗೆ ಒಂದು ಪ್ಲಾನನ್ನು ಹೊಸದಾಗಿ ಮಾಡಬೇಕೆಂಬುದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಪ್ರತಿಯೊಬ್ಬರೂ ಒಂದೊಂದು ರೀತಿಯಲ್ಲಿ ಪ್ಲಾನುಗಳನ್ನು ತಯಾರು ಮಾಡಿ ಕಳುಹಿಸುವುದಕ್ಕೆ ಬದಲಾಗಿ ಸಾರ್ವತ್ರಿಕವಾಗಿ ಎಲ್ಲಾ ಕಡೆಯಲ್ಲೂ ಒಂದೇ ತೆರನಾಗಿ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲು ಶಾಲಾ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಒಂದು ಪ್ಲಾನನ್ನು ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಸ್ಕೂಲು ಕಟ್ಟಡಗಳನ್ನು ಒಂದೇ ರೀತಿಯಲ್ಲಿ ಕಟ್ಟಿಸಬೇಕೆಂಬುದನ್ನು ಯೋಚನೆ ಮಾಡುತ್ತಿರುವುದರ ಜೊತೆಗೆ ಆಟದ ಮೈದಾನ ಮುಂತಾದುವುಗಳನ್ನು ಏರ್ಪಡಿಸುವುದಕ್ಕೂ ಪರ್ಯಾಲೋಚನೆ ಮಾಡುತ್ತೀರಾ ?

Mr. SPEAKER.—That question does not arise.

Sri T. SIDDALINGIAH.—I welcome the suggestion any way.

Sri M. MADIAH (Mysore District—Depressed Class).—Sir, is there any special plan so far as buildings of primary school buildings are concerned ?

Sri T. SIDDALINGIAH.—I have already answered that question.

ಶ್ರೀ ಎಂ. ಮಾದಯ್ಯನವರು.—ವರ್ಷೆ ವರ್ಷೆ ಇಷ್ಟು ಪ್ರೈಮರಿ ಸ್ಕೂಲ್ ಕಟ್ಟಡಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಿಸಿಕೊಡಬೇಕೆಂದು ಮೂರು ವರ್ಷದ್ದೋ ಅಥವಾ ಐದು ವರ್ಷದ್ದೋ ಒಂದು ಪ್ರೋಗ್ರಾಮ್ ಸರ್ಕಾರದಲ್ಲಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಹಳ ಕಾಲದಿಂದಲೂ ಈ ಪ್ರೈಮರಿ ಸ್ಕೂಲುಗಳ ವಿಚಾರದಲ್ಲಿ ಒಂದು ಪ್ರೋಗ್ರಾಂ ಇದೆ. ಅದರಂತೆ ನಡೆಯುತ್ತಿದೆ.

ಶ್ರೀ ಎಂ. ಮಾದಯ್ಯನವರು.—ಆ ಪ್ರೋಗ್ರಾಂ ಪ್ರಕಾರ ವರ್ಷ ಪೊಂದಕ್ಕೆ ಎಷ್ಟು ಕಟ್ಟಡಗಳನ್ನು ಕಟ್ಟಬೇಕೆಂದಿದೆ ?

Sri T. SIDDALINGIAH.—The number of new primary schools that are opened is varying. I want notice to answer.

ಶ್ರೀ ಎಂ. ಮಾದಯ್ಯನವರು.—ಹೊಸದಾಗಿ ಕೊಡತಕ್ಕ ಪ್ರೈಮರಿ ಸ್ಕೂಲುಗಳ ವಿಚಾರ ನಾನು ಕೇಳುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಪಾಠಶಾಲೆಗಳಿಗೆ ಕಟ್ಟಡಗಳಿಲ್ಲವೆಂದು ಹೇಳಿ ತಮಗೆ ಅರಿಕೆಗಳು ಬಂದಿವೆಯೇ ?

Mr. SPEAKER.—Such a representation can be made while speaking on a cut motion.

Sri M. MADIAH.—Then, I will put only a supplementary question, Sir.

ಮೈಸೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಕಟ್ಟಡ ಕಟ್ಟಿಸುವ ವಿಷಯವನ್ನು ವಹಿಸಿದೆ ಎಂದು ಹೇಳಿದ್ದೀರಿ. ಇತರ ಡಿಸ್ಟ್ರಿಕ್ಟ್‌ಗಳಲ್ಲೆಲ್ಲಾ ಕೆಲಸ ಹೀಗೆ ಮಾಡಲಿಲ್ಲ ?

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ನಚಿವರು).—ಇತರ ಡಿಸ್ಟ್ರಿಕ್ಟ್ ಬೋರ್ಡುಗಳವರು ಕೇಳಲಿಲ್ಲ. ಆದ್ದರಿಂದ ನಾವು ಕೊಡಲಿಲ್ಲ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ಕೆಲಸವನ್ನು ಆ ಡಿಸ್ಟ್ರಿಕ್ಟ್ ಬೋರ್ಡಿನವರು ಬಹಳ ಶ್ರದ್ಧೆಯಿಂದ ಆಶಿಸಿ ಅಧಿಕಾರವನ್ನು ಪಡೆದುಕೊಂಡಿದ್ದಾರೆ.

ಶ್ರೀ ಎಂ. ಮಾದಯ್ಯನವರು.—ನರ್ಕಾರದವರನ್ನು ಕೇಳಿದ್ದಕ್ಕೆ ಹಾಗೆ ಮಾಡಿದರೆಂದು ಹೇಳಿದಿರಿ. ಇದೇ ಪ್ರಕಾರ ತಾವು ಇತರೇ ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿದಿರಾ ?

Sri T. SIDDALINGIAH.—The move must come from the other side.

ಶ್ರೀ ಎಂ. ಮಾದಯ್ಯನವರು.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಮತ್ತು ಡೆಪ್ಯುಟಿ ಕಮಿಷನರಿಗೆ ವಹಿಸಿದ್ದೇವೆಂದು ಹೇಳಿದ್ದೀರಿ. ಇವರಿಬ್ಬರೂ ಹೇಗೆ ಕೆಲಸ ನಡೆಸುತ್ತಾರೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಅದರಂತೆಯೇ ಅವರು ನಡೆದುಕೊಂಡು ಹೋಗುತ್ತಾರೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ಎರಡು ಡಿಸ್ಟ್ರಿಕ್ಟ್ ಬೋರ್ಡ್‌ಗಳಲ್ಲಿ ಈ ಕಟ್ಟಡದ ಕೆಲಸಗಳನ್ನು ಮಾಡಿಸಲಿಕ್ಕೆ ಬೇಕಾದ ಇಂಜಿನಿಯರಿಂಗ್ ಸಿಬ್ಬಂದಿ ಮತ್ತು ಸಲಕರಣೆಗಳಿವೆ. ಆದ್ದರಿಂದ ಅವರು ಈ ವಿಷಯದಲ್ಲಿ ಸರ್ಕಾರದವರನ್ನು ಕೇಳಿ ಅನುಮತಿಪಡೆದುಕೊಂಡಿದ್ದಾರೆ. ಬೇರೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಲ್ಲಿ ಈ ಅನುಕೂಲವಿಲ್ಲದೆ ಅವರು ನರ್ಕಾರದವರನ್ನು ಕೇಳಿಲ್ಲ, ನಾವು ಕೊಟ್ಟಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಎರಡು ಡಿಸ್ಟ್ರಿಕ್ಟ್‌ಗಳಲ್ಲಿ ಡೆಪ್ಯುಟಿ ಕಮಿಷನರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಸಲಹೆ ತೆಗೆದುಕೊಂಡು ಮಾಡುತ್ತಾರೆಂದೂ, ಇನ್ನು ಬೇರೆಕಡೆ ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡುತ್ತಿದ್ದಾರೆಂದು ಹೇಳಿದಿರಿ. ಇದು ಹೇಗೆ ?

I want to know whether any instruction is given to the staff concerned.

Sri T. SIDDALINGIAH.—I think that question can be put to the Hon'ble Local Self-Government Minister by means of an independent question.

Sri M. MADIAH.—I want to elicit information with regard to primary school buildings, which relates to the Hon'ble Minister for Education.

Sri R. CHENNIGARAMIAH.—The buildings undertaken to be built by the District Boards will be built by them and the buildings undertaken to be built by the Engineering Department will be built by them.

Sri B. M. SHAMANNA GOWDA (Bangalore Retroceded Area—General.)—How many Government schools are there in the Civil Station area ?

Sri T. SIDDALINGIAH.—The information is not readily available. I want notice.

Sri B. M. SHAMANNA GOWDA.—Have the Madras University Colleges in the Civil Station area been affiliated to the Mysore University ?

Mr. SPEAKER.—That question does not arise. The subject matter is only with regard to primary school buildings

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಗ್ರಾಮಸ್ಥರು ತಮ್ಮ ಭಾಗದ ಅರ್ಧ ಹಣವನ್ನು ಟ್ರೆಜರಿಯಲ್ಲಿ ಡಿಪಾಜಿಟ್ ಮಾಡಿದ ಮೇಲೂ ಸ್ಕೂಲು ಕಟ್ಟಡವನ್ನು ಇದುವರೆಗೂ ಕೊಡದೆ ಇದ್ದರೆ ಈಗಲಾದರೂ ಕೊಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— ಅದನ್ನು ಆಲೋಚನೆ ಮಾಡಿ ಹೇಳಬೇಕು.

ಶ್ರೀ ಎಂ. ವಿ ಕೃಷ್ಣಪ್ಪನವರು.— ಈ ಸ್ಕೂಲುಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಡಿಸ್ಟ್ರಿಕ್ಟ್‌ನವರಿಗೂ ತಾಲ್ಲೂಕಿನವರಿಗೂ ಹಣವನ್ನು ಮಂಜೂರುಮಾಡಿಕೊಡುವವರು ಯಾರು ?

ಶ್ರೀ ಟಿ. ಸಿದ್ದಲಿಂಗಯ್ಯನವರು.–ಡಿಸ್ಟ್ರಿಕ್ಟ್‌ನವರಿಗೆ ಇಷ್ಟು, ತಾಲ್ಲೂಕಿನವರಿಗೆ ಇಷ್ಟು, ಎಂದು ಹಂಚುತ್ತಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮತ್ತೆ ಯಾವರೀತಿ ಮಾಡುತ್ತೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಷ್ಟಿಷ್ಟು ಕಟ್ಟಡಗಳು ಇಂಥಿಂಥಾ ಡಿಸ್ಟ್ರಿಕ್ಟ್‌ನಲ್ಲಲ್ಲಪೆಂದು ಹೇಳಿ ಡಿಸ್ಟ್ರಿಕ್ಟ್ ಎಜ್ಯುಕೇಷ್ಷ್ ಆಫೀಸರು ಒಂದು ಪಟ್ಟಿ ತಯಾರುಮಾಡಿ ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ. ಅವರಿಂದ ಸರ್ಕಾರದ ಮಂಜೂರಾತಿಗೆ ಬರುತ್ತದೆ.

ಶ್ರೀ ಎಂ. ವಿ, ಕೃಷ್ಣಪ್ಪನವರು.—ಪ್ರೈಮರಿ ಸ್ಕೂಲು ಕಟ್ಟಡಗಳ ಸಮಸ್ಯೆಯನ್ನು ಪರಿಹರಿಸಬೇಕಾದರೆ ದೇವಸ್ಥಾನಗಳೇ ಮುಂತಾದ ಸಾರ್ವಜನಿಕ ಕಟ್ಟಡಗಳನ್ನು ಉಪಯೋಗಿಸಿಕೊಂಡರೆ ಉತ್ತಮವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಮ್ಮ ಸಲಹೆಯನ್ನು ಆಲೋಚನೆಮಾಡಬಹುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಮ್ಮ ಕಾಲದಲ್ಲಾದರೂ ಇದನ್ನು ಜಾರಿಗೆ ತರುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಡೋಣ.

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ–ನಿಮ್ನ ಪಂಗಡ).—ಪ್ರೈಮರಿ ಸ್ಕೂಲುಗಳನ್ನು ನಡೆಸುವುದಕ್ಕೆ ಕಟ್ಟಡಗಳಿಲ್ಲದೆ ಎಷ್ಟೋ ಕಡೆ ದೇವಸ್ಥಾನಗಳಲ್ಲಿ ಸ್ಕೂಲುಗಳು ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಉತ್ತರವನ್ನು ಈಗಲೇ ಹೇಳಲಾರೆ.

ಶ್ರೀ ಗೋವಿಂದ ದಾಸ್‌ರವರು.—ಅಂತೂ ಅನೇಕ ಪ್ರೈಮರಿ ಸ್ಕೂಲುಗಳು ದೇವಸ್ಥಾನಗಳಲ್ಲಿ ನಡೆಯುತ್ತಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನಾಗಲೇ ಒಪ್ಪಿಕೊಂಡಿದ್ದೇನೆ.

ಶ್ರೀ ಗೋವಿಂದ ದಾಸ್‌ರವರು.—ಹೀಗೆ ದೇವಸ್ಥಾನಗಳಲ್ಲಿ ಮಾಡುತ್ತಿರುವುದರಿಂದ ನಮ್ಮ ಹರಿಜನ ಬಾಲಕರಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಂಥಾ ತೊಂದರೆಯೇನೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಗೋವಿಂದದಾಸ್‌ರವರು.– ಹಾಗಾದರೆ ದೇವಸ್ಥಾನಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ನಡೆಸಕೂಡದೆಂದು ಏನಾದರೂ ಹುಕುಂ ಹೊರಡಿಸಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಂಥ ತೊಂದರೆ ನಮ್ಮ ಗಮನಕ್ಕೆ ಬಂದಿಲ್ಲ. ನಾವೇನೂ ಅಂಥ ಹುಕುಮನ್ನು ಹೊರಡಿಸಿಲ್ಲ.

Sri H. C. LINGA REDDY (Kolar District-General).—How many schools are there in the State without proper buildings ?

Sri T. SIDDALINGIAH.—I want notice to answer that question.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕಟ್ಟಡಗಳಿಗಾಗಿ 7 ಲಕ್ಷ 22 ಸಾವಿರ ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದಿರಿ. ಇದನ್ನು ಡಿಸ್ಟ್ರಿಕ್ಟ್‌ವಾರು ಎಷ್ಟೆಷ್ಟು ಕೊಟ್ಟಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.–ನೋಟೀಸ್ ಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕಟ್ಟಡಗಳನ್ನು ಮಂಜೂರುಮಾಡಬೇಕಾದರೆ ಸಾಮಾನ್ಯವಾಗಿ ಯಾವ ಆಧಾರದ ಮೇಲೆ ಮಾಡುತ್ತೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸ್ಥಳದ ಅಧಿಕಾರಿಗಳು ಅದನ್ನು ನಿರ್ಣಯಮಾಡುತ್ತಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಾಮಾನ್ಯವಾಗಿ ಸರ್ಕಾರದವರು ಕಟ್ಟಿಸಿರುವ ಕಟ್ಟಡಗಳು ಜಾಸ್ತಿಯಿವೆಯೇ ಅಥವಾ ಗ್ರಾಮಸ್ಥರು ಕಟ್ಟಿಸಿರುವ ಕಟ್ಟಡಗಳು ಜಾಸ್ತಿಯಿವೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರ್ಕಾರದವರು ಕಟ್ಟಿಸುವುವುಗಳೇ ಜಾಸ್ತಿ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು–ನಿಮ್ನ ಪಂಗಡ).—ಬಾಲಕರ ಪಾಠಶಾಲೆಗೆ ಕೊಡುವ ಉತ್ತೇಜನವನ್ನು ಬಾಲಕಿಯರ ಪಾಠಶಾಲೆಗೂ ಕೊಡುತ್ತಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಂಡಿತ ಹೆಚ್ಚು ಗಮನ ಕೊಡುತ್ತಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.–ಹಾಗಾದರೆ 1949–50 ರಲ್ಲಿ ಬಾಲಕಿಯವರ ಪಾಠಶಾಲೆಗಳಿಗಾಗಿ ಎಷ್ಟು ಕಟ್ಟಡಗಳು ಮಂಜೂರಾಗಿವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬಾಲಕಿಯರ ಪಾಠಶಾಲೆಗಳಿಗೆ ಉಪಾಧ್ಯಾಯಿನಿಯರನ್ನು ನೇಮಿಸುತ್ತಿದ್ದೀರಾ ?

ಅಧ್ಯಕ್ಷರು.—ಕಟ್ಟಡಗಳ ಗ್ರಾಂಟು ವಿಷಯಕ್ಕೆ ಸಂಬಂಧಪಟ್ಟ ಈ ಪ್ರಶ್ನೆಗೆ ಅದು ಸಂಬಂಧಪಡುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಪ್ರತಿ ಹೋಬಳಿಯಲ್ಲೂ ಒಂದು ಬಾಲಿಕಾ ಪಾಠಶಾಲೆಯನ್ನು ಕಡ್ಡಾಯವಾಗಿ ಕಟ್ಟಬೇಕೆಂಬುದನ್ನು ಜಾರಿಗೆ ತರುತ್ತೀರಾ ?

Mr. SPEAKER.–That does not arise.

Question time is over.

UNSTARRED QUESTIONS

(Answers to which were laid on the Table).

Officers drawing Specialists' Allowances.

*Q.—62. Sri L. SIDDAPPA (Shimoga District—General).—